SDM LAW LIBRARY

**0101/0423**

## First Semester 3 Year LL.B./IV Semester 5 Year B.A. LL.B./B.B.A. LL.B. Examination, June/July 2016
## CONTRACT – I
## General Principles of Contract

Duration : 3 Hours Max. Marks : 100

**Instructions** : 1. Answer Q.No. **9** and **any five** of the remaining questions.
2. Q.No. **9** carries **20** marks and the remaining questions carry **16** marks **each**.
3. Answers should be written either in **English** or **Kannada** **completely**.

Q. No. 1. Define 'proposal'. Explain the circumstances under which it lapses. Marks : 16
'ಪ್ರಸ್ತಾವನೆ'ಯನ್ನು ವ್ಯಾಖ್ಯಾನಿಸಿರಿ. ಅದು ಯಾವ ಸಂದರ್ಭಗಳಲ್ಲಿ ರದ್ದಾಗುತ್ತದೆ ವಿವರಿಸಿರಿ.

Q. No. 2. What is consent ? Explain the circumstances under which consent is said to be free. Marks : 16
ಸಮ್ಮತಿ ಎಂದರೇನು ? ಯಾವ ಸಂದರ್ಭಗಳಲ್ಲಿ ಸಮ್ಮತಿಯು ಮುಕ್ತ ಸಮ್ಮತಿಯೆಂದು ಹೇಳಲ್ಪಡುತ್ತದೆ ವಿವರಿಸಿರಿ.

Q. No. 3. Explain the 'Doctrine of Privity of Contract'. State the exceptions if any. Marks : 16
'ಕರಾರು ಸಂಬಂಧ ಸಿದ್ಧಾಂತ'ವನ್ನು ವಿವರಿಸಿರಿ. ಅದಕ್ಕೆ ಅಪವಾದಗಳಿದ್ದರೆ ಅವುಗಳನ್ನು ತಿಳಿಸಿರಿ.

Q. No. 4. Discuss the 'Doctrine of Frustration'. Marks : 16
'ವಿಫಲತಾ (ಅಸಾಧ್ಯತಾ) ಸಿದ್ಧಾಂತ'ವನ್ನು ಚರ್ಚಿಸಿರಿ.

Q. No. 5. What is 'Quasi-Contract' ? Explain the different types of quasi-contracts under the Indian Contract Act. Marks : 16
'ಅರೆ ಒಡಂಬಡಿಕೆ' ಎಂದರೇನು ? ಭಾರತೀಯ ಕರಾರು ಅಧಿನಿಯಮದಡಿಯಲ್ಲಿರುವ ವಿವಿಧ ಬಗೆಯ ಅರೆಒಡಂಬಡಿಕೆಗಳನ್ನು ವಿವರಿಸಿರಿ.

SDM LAW LIBRARY



Q. No. 6. Under what circumstances contract can be specifically enforced ? Explain. Marks : 16
ಯಾವ ಸಂದರ್ಭಗಳಲ್ಲಿ, ಕರಾರಿನ ನಿರ್ದಿಷ್ಟ ನೆರವೇರಿಕೆಯನ್ನು ಕೇಳಬಹುದು ? ವಿವರಿಸಿರಿ.

Q. No. 7. Explain the different modes of discharge of contract. Marks : 16
ಕರಾರನ್ನು ಅಂತ್ಯ ಮಾಡುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 8. Write short notes on **any two** of the following : Marks : 2×8=16
ಕೆಳಗಿನ ಯಾವುದೇ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Unlawful object.
ಕಾನೂನುಬಾಹಿರ ಉದ್ದೇಶ.

b) Liquidated damages and penalty.
ನಿಗದಿತ ದ್ರವ್ಯ ಪರಿಹಾರ ಮತ್ತು ದಂಡ.

c) Different kinds of injuctions.
ವಿವಿಧ ರೀತಿಯ ಪ್ರತಿಬಂಧಕಾಜ್ಞೆಗಳು.

Q. No. 9. Solve **any two** of the following problems : Marks : 2×10=20
ಕೆಳಗಿನ ಯಾವುದೇ ಎರಡು ಸಮಸ್ಯೆಗಳನ್ನು ಬಿಡಿಸಿರಿ:

a) Anand and Bhaskar enter into an agreement that Anand shall pay Bhaskar Rs. 10,000, if it rains on next Monday and that Bhaskar shall pay Anand the same amount if it does not rain. If it rains on next Monday and Anand refuses to pay the said amount, can Bhaskar sue Anand to recover the amount ? Decide.
ಆನಂದ ಮತ್ತು ಭಾಸ್ಕರ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ. ಅದರ ಪ್ರಕಾರ ಮುಂದಿನ ಸೋಮವಾರ ಮಳೆ ಬಂದರೆ ಆನಂದನು ಭಾಸ್ಕರನಿಗೆ ಹತ್ತು ಸಾವಿರ ರೂಪಾಯಿಗಳನ್ನು ಹಾಗೂ ಮಳೆ ಬರದಿದ್ದರೆ ಭಾಸ್ಕರನು ಆನಂದನಿಗೆ ಅದೇ ಮೊತ್ತವನ್ನು ಕೊಡಬೇಕಾಗುತ್ತದೆ. ಮುಂದಿನ ಸೋಮವಾರ ಒಮ್ಮೆ ಮಳೆ ಬಂದು ಆನಂದನು ಆ ಮೊತ್ತವನ್ನು ಕೊಡಲು ನಿರಾಕರಿಸಿದರೆ, ಭಾಸ್ಕರನು ಆ ಮೊತ್ತವನ್ನು ಪಡೆಯಲು ದಾವೆಯನ್ನು ಹೂಡಬಹುದೇ ? ನಿರ್ಣಯಿಸಿರಿ.

SDM LAW LIBRARY



b) 'A' posted his proposal letter to sell his car to 'B' on 1st Oct. 2015. 'B' receives the letter on 3rd Oct. 2015 and on the same day he posted acceptance letter to 'A'. Thereafter, 'B' sends telegram revoking his acceptance on 4th Oct. 2015. 'A' receives B's acceptance letter on 5th Oct. 2015 and telegram on 6th Oct. 2015. Is there à contract between 'A' and 'B' ? Decide.

'ಅ'ನು ತನ್ನ ಕಾರನ್ನು ಮಾರಾಟ ಮಾಡುವ ಸಲುವಾಗಿ ಪ್ರಸ್ತಾವನಾ ಪತ್ರವನ್ನು 'ಬ' ನಿಗೆ 1ನೇ ಅಕ್ಟೋಬರ್ 2015 ರಂದು ಅಂಚೆಯ ಮೂಲಕ ಕಳಿಸುತ್ತಾನೆ. ಆ ಪತ್ರವನ್ನು 'ಬ'ನು 3ನೇ ಅಕ್ಟೋಬರ್ 2015 ರಂದು ಪಡೆದುಕೊಳ್ಳುತ್ತಾನೆ ಹಾಗೂ ಅದೇ ದಿನ ತನ್ನ ಅಂಗೀಕಾರ ಪತ್ರವನ್ನು 'ಅ'ನಿಗೆ ಅಂಚೆಯ ಮೂಲಕ ಕಳಿಸಿಕೊಡುತ್ತಾನೆ. ತದನಂತರ 'ಬ'ನು 4ನೇ ಅಕ್ಟೋಬರ್ 2015 ರಂದು ತನ್ನ ಅಂಗೀಕಾರವನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಒಂದು ಟೆಲಿಗ್ರಾಮ್‌ನ್ನು 'ಅ' ನಿಗೆ ಕಳಿಸುತ್ತಾನೆ. 'ಅ'ನು ಅಂಗೀಕಾರ ಪತ್ರವನ್ನು 5ನೇ ಅಕ್ಟೋಬರ್ 2015 ರಂದು ಮತ್ತು ಟೆಲಿಗ್ರಾಮ್‌ನ್ನು 6ನೇ ಅಕ್ಟೋಬರ್ 2015 ರಂದು ಪಡೆದುಕೊಳ್ಳುತ್ತಾನೆ. 'ಅ' ಮತ್ತು 'ಬ'ನ ನಡುವೆ ಒಂದು ಕರಾರು ಇರುತ್ತದೆಯೇ ? ನಿರ್ಣಯಿಸಿರಿ.

c) Shankar promised to marry Seeta after the death of his father. While his father was still alive, he married Suma. Seeta wants to sue Shankar for breach of contract. Can she do so ? Decide.

ಶಂಕರನು ತನ್ನ ತಂದೆಯ ನಿಧನದ ನಂತರ ಸೀತಾಳನ್ನು ಮದುವೆಯಾಗುವುದಾಗಿ ಅವಳಿಗೆ ವಚನವನ್ನು ನೀಡಿದ್ದನು. ಆದರೆ ಅವನು ತನ್ನ ತಂದೆ ಬದುಕಿರುವಾಗಲೇ ಸುಮಾಳನ್ನು ಮದುವೆಯಾಗುತ್ತಾನೆ. ಸೀತಾಳು ಕರಾರಿನ ಉಲ್ಲಂಘನೆಗಾಗಿ ಶಂಕರನ ವಿರುದ್ಧ ದಾವೆಯನ್ನು ಹೂಡಲು ಬಯಸುತ್ತಾಳೆ. ಅವಳು ಹಾಗೆ ಮಾಡಬಹುದೇ ? ನಿರ್ಣಯಿಸಿರಿ.